# ಪೆಪ್ಸಿ: ನಿಂಬೆಹಣ್ಣಿನ ರಸ 'ನಿಂಬೂಸ್' ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಪು ಪಾನೀಯ ತಯಾರಿಕಾ ಕಂಪೆನಿ ಪೆಪ್ಸಿಕೊ ಇಂಡಿಯಾ ತಯಾರಿಸಿರುವ ನಿಂಬೆಹಣ್ಣಿನ ರಸ 'ನಿಂಬೂಸ್ ಬೈ7ಅಪ್' ಪಾನೀಯವನ್ನು ಚಿತ್ರನಟ ಪುನೀತ್ ರಾಜಕುಮಾರ್ ಸೋಮವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು.

'ಬಹುತೇಕ ಜನರು ಇಷ್ಟಪಡುವ ನಿಂಬೆ ರಸದ ಪಾನೀಯವನ್ನು ಪೆಪ್ಸಿಕೊ ಕಂಪೆನಿ ಬಿಡುಗಡೆ ಮಾಡಿದ್ದು, ಇದರ ರುಚಿ ಸಹ ನೈಜವಾಗಿದ್ದು, ಬೇಸಿಗೆಗೆ ಹೇಳಿಮಾಡಿಸಿದ ಪಾನೀಯ ಇದಾಗಿದೆ. ಇದನ್ನು ಜನ ಇಷ್ಟಪಡುವುದರಲ್ಲಿ ಅನುಮಾನವೇ ಇಲ್ಲ. ಇದರ ಹೆಸರು ಸಹ ಆಕರ್ಷಕವಾಗಿದೆ' ಎಂದು 'ನಿಂಬೂಸ್' ಗುಟುಕು ಚಪ್ಪರಿಸಿ ನುಡಿದರು ಪುನೀತ್.

ಕಾರ್ಯಕ್ರಮದಲ್ಲಿ ಪೆಪ್ಸಿಕೊ ಕಂಪೆನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಅಲ್ಪನಾ ಟಿಟಸ್ ಮಾತನಾಡಿ 'ನಿಂಬೂಸ್'ನ ವಿಶೇಷತೆಗಳನ್ನು ಪರಿಚಯಿಸಿದರು. ಭಾರತೀಯರ ಅಚ್ಚುಮೆಚ್ಚಿನ ಪೇಯವಾಗಿರುವ ನಿಂಬೆಹಣ್ಣಿನ ರಸವನ್ನು ಅದರ ಸಹಜ ರುಚಿಯೊಂದಿಗೆ ಗ್ರಾಹಕರಿಗೆ ಪರಿಚಯಿಸಲು ಕಂಪೆನಿ 'ನಿಂಬೂಸ್' ಅನ್ನು ಬಿಡುಗಡೆ ಮಾಡಿದೆ ಎಂದರು.

ಬಾಟಲ್, ಟೆಟ್ರಾ ಮತ್ತು ಪೆಟ್ ಬಾಟಲ್‌ಗಳಲ್ಲಿಯೂ ಲಭ್ಯವಿದ್ದು, ಬೆಲೆ ರೂ 10ರಿಂದ ರೂ 15 ಇದೆ. ರಾಜ್ಯದ ಎಲ್ಲ ವ್ಯಾಪಾರಿ ಮಳಿಗೆಗಳಲ್ಲಿ ಲಭ್ಯವಿದೆ.